ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.,) ಬೆಂಗಳೂರು
(ಕರ್ನಾಟಕ ಸರ್ಕಾರ ಒಂದು ಉದ್ಯಮ)
KSMD&MCL
'ಎಫ್' ಬ್ಲಾಕ್, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009, ದೂ: 080–22236837

ಸಂ: ಕರಾಮಾಅ&ಮಾನಿನಿ/ವ್ಯನಿ/ಸತೋನಿ1/74/2017–18 ದಿನಾಂಕ 08–08–2018

## ಕಛೇರಿ ಆದೇಶ

ವಿಷಯ: 2018-19 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳನ್ನು ಗುರುತಿಸಲು ಟೆಂಡರ್ ಅನುಮೋದಿಸುವ ಕುರಿತು.

ಉಲ್ಲೇಖ: 1) ಟೆಂಡರ್ ಪ್ರಕಟಣೆ ಸಂ: ಕರಾಮಾಅ&ಮಾನಿನಿ/ವ್ಯನಿ/ಸತೋನಿ1/74/2017-18, ದಿ:01.03.2018.
2) ದರ ಸಮಾಲೋಚನಾ ಸಭೆ ದಿ:27.07.2018.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19 ನೇ ಸಾಲಿನಲ್ಲಿ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ, ಬೆಂಗಳೂರು ರವರ ವತಿಯಿಂದ ರಾಜ್ಯದ ಮಾವು ಬೆಳೆಗಾರರಿಗೆ ಕೊಯ್ಲು ಪೂರ್ವ ನಂತರ ಚಟುವಟಿಕೆಗಳಿಗೆ ಅವಶ್ಯವಿರುವ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಸರಬರಾಜು ಮಾಡಲು 15 ಮತ್ತು 20 ಕೆ. ಜಿ. ಸಾಮರ್ಥ್ಯ ವಿವಿಧ ಮಾದರಿಗಳಿಗೆ (Model) ಎಲ್-1 ದರಗಳನ್ನು ನಿಗದಿಪಡಿಸಿ ಸರಬರಾಜು ಸಂಸ್ಥೆಗಳನ್ನು ಗುರುತಿಸಲು ಉಲ್ಲೇಖ(1) ರಲ್ಲಿ ಟೆಂಡರ್ ನ್ನು ಆಹ್ವಾನಿಸಲಾಗಿರುತ್ತದೆ.

ಅದರಂತೆ ಟೆಂಡರ್ ಬಿಡ್ ನಲ್ಲಿ ಭಾಗವಹಿಸಿದ ಸಂಸ್ಥೆಗಳನ್ನು ಉಲ್ಲೇಖ(2) ರಲ್ಲಿ ದರ ಸಮಾಲೋಚನಾ (Rate Negotiation) ಸಭೆಯಲ್ಲಿ ಸಾಮರ್ಥ್ಯ (Capacity), ವಿವಿಧ ಮಾದರಿಗಳಿಗೆ (Model) ಅಂತಿಮಗೊಳಿಸಲಾದ ಎಂಪ್ಯಾನಲ್ ಸಂಸ್ಥೆಗಳ, ಎಲ್-1 ದರಗಳನ್ನು ಅಂತಿಮಗೊಳಿಸಿಲಾಗಿರುತ್ತದೆ. ಅದರಂತೆ ಅನುಬಂಧ (1)ರಲ್ಲಿ ಮತ್ತು ಅನುಬಂಧ(2) ರಲ್ಲಿ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳ ವಿವಿಧ ಮಾದರಿ ಅನುಗುಣವಾಗಿ ನಿಗದಿಪಡಿಸಲಾದ ಎಲ್-1 ದರಗಳನ್ನು, ರೈತರ ವಂತಿಕೆ ಮತ್ತು ನಿಗಮದ ವಂತಿಕೆ ವಿವರಗಳನ್ನು ನಮೂದಿಸಿ ಅಂತಿಮಗೊಳಿಸಲಾಗಿದೆ. ಈ ದರಗಳು ದಿನಾಂಕ:30.07.2019 ರ ವರೆಗೆ ಜಾರಿಯಲ್ಲಿರುತ್ತದೆ.

ಲಗತ್ತು: ಅನುಬಂಧ-I, ಅನುಬಂಧ-II ಮಾರ್ಗಸೂಚಿ ಮತ್ತು ಅರ್ಜಿ ನಮೂನೆ

ವ್ಯವಸ್ಥಾಪಕ ನಿರ್ದೇಶಕರು
ಮಾವು ಅಭಿವೃದ್ಧಿ ನಿಗಮ, ಬೆಂ

ಪ್ರತಿಯನ್ನು :

1) ಎಲ್ಲಾ ತೋಟಗಾರಿಕೆ ಅಪರ ನಿರ್ದೇಶಕರು/ಜಂಟಿ ನಿರ್ದೇಶಕರು, ಲಾಲ್ ಬಾಗ್, ಬೆಂಗಳೂರು ರವರ ಮಾಹಿತಿಗಾಗಿ
2) ಎಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ
3) M/s Nilakamal Pvt. Ltd., Bengaluru ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ (ಮೊ. ನಂ. 9742904333)
4) ಸಿದ್ಧಾರೂಢ ತೋಟಗಾರಿಕೆ ಬೆಳೆಗಾರರ ಸಹಕಾರ ಸೊಸೈಟಿ, ಬೆಳಗಾವಿ ಜಿಲ್ಲೆ ಗೋಕಾಕ ತಾ, ತುಕ್ಕಾನಟ್ಟಿ (M/S Samrudhi Dealer), ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ (ಮೊ. ನಂ. 9739702930)

# Annexure-I

2018-19 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳ ವಿವಿದ ಸಾಮರ್ಥ್ಯ, ಮಾದರಿಗಳಿಗೆ ನಿಗದಿಪಡಿಸಲಾಗಿರುವ ದರ ವಿವರಗಳು

| Sl No | Item Name | Categery Code | Crate weight in KGs | Description (Length MM)- outer | | | | |
|---|---|---|---|---|---|---|---|---|
| | | | | Model | L | W | H | L-1 Price/Crate Rs |
| 1 | Plastic Crates 15 kg capacity Type-1 | PCN-1 | 2.00 | JBC: 53305 | 525 | 360 | 305 | 400 |
| 2 | Plastic Crates 15 kg capacity Type-2(stackable and Nestable) | PCN-2 | 1.80 | JR 5838210 | 580 | 380 | 210 | 360 |
| 3 | Plastic Crates 15 kg Capacity Type-3(Stackable and Nestable) | PCN-3 | 1.75 | JR 53300DW/BJ | 542 | 360 | 300 | 350 |
| 4 | Plastic Crates 20 kg Capacity Type-1(stackable and Nestable) | PCN-4 | 2.20 | JR:6238300 | 626 | 381 | 300 | 420 |
| 5 | Plastic Crates 20 kg Capacity Type-2(Stackable and Nestable) | PCN-5 | 1.75 | JR 53300 DW | 542 | 360 | 300 | 340 |
| 6 | Plastic Crates 20 kg Capacity Type-3 (stackable and Nestable) | PCN-6 | 1.50 | JR 53300 LW | 542 | 360 | 300 | 305 |
| | | | | | | | | |

| Sl No | Item Name | Categery Code | Crate weight in KGs | Description (Length MM) - outer | | | | L-1 Price/Crate Rs |
|---|---|---|---|---|---|---|---|---|
| | | | | Model | L | W | H | |
| 7 | Plastic Crates 15 kg Capacity Type-3(Stackable and Nestable) | PCS-7 | 1.50 | W:1500 | 494 | 326 | 250 | 290 |
| 8 | Plastic Crates 20 kg Capacity Type-1(stackable and Nestable) | PCS-8 | 1.90 | W:1899 | 540 | 340 | 287 | 365 |
| 9 | Plastic Crates 20 kg Capacity Type-3 (stackable and Nestable) | PCS-9 | 1.75 | W:1750 | 533 | 351 | 287 | 330 |

Managing Director
Karnataka State Mango
Development & Marketing Corp. Ltd.
'E' Block, 2nd Floor, Cauvery Bhavan,
Bangalore-09.

# ಅನುಬಂಧ-II

## 2018-19 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳ ವಿವಿಧ ಸಾಮರ್ಥ್ಯ, ಮಾದರಿಗಳಿಗೆ ನಿಗದಿಪಡಿಸಲಾಗಿರುವ ದರಗಳಿಗೆ ರೈತರ ವಂತಿಕೆ ಮತ್ತು ನಿಗಮದ ವಂತಿಕೆ ಭರಿಸಬೇಕಾದ ವಿವರಗಳು

| Capacity (KG) | Crate weight range (KG) | Eligible Category Types/Code | L-1 Rates (Rs/Crates) | L-1 Company | ಸಾಮಾನ್ಯ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) | | ಪ.ಜಾ & ಪ.ಪಂ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ ) ರೂ.ಗಳಲ್ಲಿ | | ಸಾಮಾನ್ಯ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) ರೂ.ಗಳಲ್ಲಿ | | ಪ.ಜಾ & ಪ.ಪಂ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) ರೂ.ಗಳಲ್ಲಿ | |
|---|---|---|---|---|---|---|---|---|---|---|---|---|
| | | | | | ರೈತರ ವಂತಿಕೆ ಶೇ.40% | ಮಾವು ನಿಗಮದ ವಂತಿಕೆ ಶೇ. 60% | ರೈತರ ವಂತಿಕೆ ಶೇ.10% | ಮಾವು ನಿಗಮದ ವಂತಿಕೆ ಶೇ.90% | ರೈತರ ವಂತಿಕೆ ಶೇ.40% | ಮಾವು ನಿಗಮದ ವಂತಿಕೆ ಶೇ. 60% | ರೈತರ ವಂತಿಕೆ ಶೇ.10% | ಮಾವು ನಿಗಮದ ವಂತಿಕೆ ಶೇ. 90% |
| | | | | | Samruddhi Dealer | | | | Nilkamal Ltd | | | |
| 15 KG | 1.50 | PCS-7 | 290.00 | *Samruddhi Dealer | 116.00 | 174.00 | 29.00 | 261.00 | | | | |
| | From 1.75 to 1.80 | PCN-2 | 350.00 | Nilkamal Ltd | | | | | 140.00 | 210.00 | 35.00 | 315.00 |
| | | PCN-3 | | | | | | | 150.00 | 210.00 | 45.00 | 315.00 |
| | 2.00 | PCN-1 | 400.00 | Nilkamal Ltd | | | | | 160.00 | 240.00 | 40.00 | 360.00 |
| 20 KG | 1.50 | PCN-6 | 305.00 | Nilkamal Ltd | | | | | 122.00 | 183.00 | 30.50 | 274.50 |
| | From 1.75 to 1.80 | PCN-5 and PCS-9 | 330.00 | *Samruddhi Dealer | 132.00 | 198.00 | 33.00 | 297.00 | 142.00 | 198.00 | 43.00 | 297.00 |
| | From 1.90 to 2.01 | PCS-7 | 365.00 | *Samruddhi Dealer | 146.00 | 219.00 | 36.50 | 328.50 | | | | |
| | 2.20 | PCN-4 | 420.00 | Nilkamal Ltd | | | | | 168.00 | 252.00 | 42.00 | 378.00 |

* ಸಿದ್ದಾರೂಢ ತೋಟಗಾರಿಕೆ ಬೆಳೆಗಾರರ ಸಹಕಾರ ಸೊಸೈಟಿ, ಬೆಳಗಾವಿ ಜಿಲ್ಲೆ ಗೋಕಾಕ ತಾ, ತುಕ್ಕಾನಟ್ಟಿ. (ಮೆ: ಸಮೃದ್ಧಿ ಡೀಲರ್)

Managing Director
Karnataka State Mango
Development & Marketing Corp. Ltd.
'F' Block, 2nd Floor, Cauvery Bhavan,
Bangalore-09.

**2018-19 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತದ ವತಿಯಿಂದ ಮಾವು ಬೆಳೆಗಾರರು ಪ್ಲಾಸ್ಟಿಕ್ ಕ್ರೇಟ್ಸ್ (Plastic Crates) ಸಹಾಯಧನ ಪಡೆಯುವ ಕಾರ್ಯಕ್ರಮಗಳ ಅನುಷ್ಠಾನ ಮಾರ್ಗಸೂಚಿ:**

ಮಾವಿನ ಹಣ್ಣಿನ ಕೊಯ್ಲು ನಂತರದ ಸಾಗಾಣಿಕೆಯಲ್ಲಿ ಶೇ.15ರಷ್ಟು ನಷ್ಟವಾಗುತ್ತಿದ್ದು, ಈ ನಷ್ಟವನ್ನು ಕಡಿಮೆಗೊಳಿಸಲು ಪ್ಲಾಸ್ಟಿಕ್ ಕ್ರೇಟ್ಸ್ ಉಪಯೋಗಿಸುವುದು ಅತ್ಯವಶ್ಯಕ. ನಿಗಮದ ಅನುಮೋದಿತ Empanelled ಸಂಸ್ಥೆಗಳಿಂದ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸುವ ಮಾವು ಬೆಳೆಗಾರರಿಗೆ ನಿಗಮದಿಂದ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುವುದು.

## I) ಫಲಾನುಭವಿಗಳ ಅರ್ಹತೆ:

1. ಫಲಾನುಭವಿಗಳು ಮಾವು ಬೆಳೆಯುವ ರೈತರಾಗಿರಬೇಕು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರ ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು.
2. ಮಹಿಳೆಯ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದ್ದಲ್ಲಿ ಮಾನ್ಯ ಮಾಡಬಾರದು. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
3. ಫಲಾನುಭವಿ ರೈತರು ತೋಟಗಾರಿಕೆ ಇಲಾಖೆಯ/ಇತರೆ ಅಭಿವೃದ್ಧಿ ಇಲಾಖೆಗಳ ಯಾವುದೇ ಯೋಜನೆ ಅಡಿ ಸಹಾಯಧನ ಪಡೆದಿದ್ದಲ್ಲಿ, ಸದರಿ ಕಾರ್ಯಕ್ರಮದಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
4. ಫಲಾನುಭವಿ ಅರ್ಜಿಯಲ್ಲಿ ಕೋರಿರುವ ಸಹಾಯಧನವನ್ನು ಘಟಕವಾರು ವಿವರಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಅಥವಾ ಅದಕ್ಕೆ ಅನುಗುಣವಾಗಿ ಲೆಕ್ಕ ಹಾಕಿ ಸಹಾಯಧನವನ್ನು ವಿತರಿಸುವುದು.
5. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ರವರು ಅರ್ಹ ರೈತರಿಂದ ಅರ್ಜಿಗಳನ್ನು ಆಹ್ವಾನಿಸಲು ಪ್ರಕಟಣೆಯನ್ನು ಸ್ಥಳೀಯ ಪತ್ರಿಕೆಗಳ ಮುಖಾಂತರವಾಗಿ ಹಾಗೂ ಜಿಲ್ಲೆಯ ಹಾಗೂ ತಾಲ್ಲೂಕುಗಳ ಎಲ್ಲಾ ಕಛೇರಿ ಸೂಚನಾ ಫಲಕದಲ್ಲಿ ಪ್ರರ್ದಶಿಸುವ ಮೂಲಕ ಹೆಚ್ಚಿನ ಪ್ರಚಾರ ನೀಡಿ, ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.
6. ಪ್ರಕಟಣೆಯಲ್ಲಿ ಕಡ್ಡಾಯವಾಗಿ, ಫಲಾನುಭವಿಗಳ ಅರ್ಹತೆ, ಆಯ್ಕೆಯ ಮಾನದಂಡಗಳು, ಸಲ್ಲಿಸಬೇಕಾದ ದಾಖಲಾತಿಗಳು, ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ, ಹೆಚ್ಚಿನ ಅರ್ಜಿಗಳನ್ನು ಸ್ವೀಕರಿಸಿದ್ದಲ್ಲಿ ಅನುಸರಿಸುವ ವಿಧಾನದ ಬಗ್ಗೆ ಸ್ಪಷ್ಟ ಮಾಹಿತಿ ಇರತಕ್ಕದ್ದು.
7. ರೈತ ಮಹಿಳೆಯರಿಗೆ ಆದ್ಯತೆ ನೀಡುವುದು ಹಾಗೂ ಸಣ್ಣ, ಅತೀ ಸಣ್ಣ ಮತ್ತು ಪ.ಜಾ/ಪ.ಪಂ, ಮತ್ತು ಇತರೆ ಎಲ್ಲಾ ವರ್ಗದವರು ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

## II)ಸಲ್ಲಿಸಬೇಕಾದ ದಾಖಲಾತಿಗಳು :

1. ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ. ಹಾಗೂ ಮೊಬೈಲ್ ದೂರವಾಣಿ ಸಂಖ್ಯೆ ವಿವರಗಳು
2. 2018–19 ನೇ ಸಾಲಿನ ಪಹಣಿ/RTC –
3. ಪಹಣಿಯಲ್ಲಿ ಮಾವು ಬೆಳೆ, ವಿಸ್ತೀರ್ಣ ನಮೂದಿಸಿರಬೇಕು ಪಹಣಿಯಲ್ಲಿ ನಮೂದಿಲ್ಲದಿದ್ದಲ್ಲಿ ಬೆಳೆ ದೃಢೀಕರಣ ಪತ್ರ ಸಲ್ಲಿಸುವುದು.
4. ಆಧಾರ್ ಕಾರ್ಡ್ ಪ್ರತಿ.
5. ಆಧಾರ್ ಕಾರ್ಡ್ ಪ್ರತಿ ಇಲ್ಲದಿದ್ದಲ್ಲಿ ಮತದಾರರ ಗುರುತಿನ ಚೀಟಿ ಕಡ್ಡಾಯ.
6. ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ ವರ್ಗ ಆಗಿದ್ದಲ್ಲಿ ಮಾತ್ರ)
7. ಬ್ಯಾಂಕ್ ಖಾತೆಯ ವಿವರಗಳು (IFSC ಕೊಡ್‌ನೊಂದಿಗೆ) ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಲಗತ್ತಿಸುವುದು .
8. **ಪ್ಲಾಸ್ಟಿಕ್ ಕ್ರೇಟ್ಸ್‌ನೊಂದಿಗೆ ಫಲಾನುಭವಿಯ ಛಾಯಚಿತ್ರ ಕಡ್ಡಾಯವಾಗಿ ಸಲ್ಲಿಸುವುದು.**

## III) ಸಹಾಯಧನದ ವಿವರ:

1. ಶ್ರೀ. ಸಿದ್ದರೂಢ ತೋಟಗಾರಿಕೆ ಬೆಳೆಗಾರರು ಮತ್ತು ಉತ್ಪಾದಕರ ಸಹಕಾರ ಸೊಸೈಟಿ, ಬೆಳಗಾವಿ ಸಂಸ್ಥೆ ಮತ್ತು ನೀಲ್ ಕಮಲ್, ಬೆಂಗಳೂರು ಸಂಸ್ಥೆಗಳ ವಿವಿದ 15 ಕೆ.ಜಿ. ಮತ್ತು 20 ಕೆ.ಜಿ. ಸಾಮರ್ಥ್ಯದ ವಿವಿಧ ವಿಶಿಷ್ಠತೆಯ ಪ್ಲಾಸ್ಟಿಕ್ ಕ್ರೇಟ್ಸ್‌ನ ಅನುಮೋದಿತ L1 ದರಗಳಿಗೆ ನಿಗಮದ ವಂತಿಕೆ ಶೇ60/90 ರಷ್ಟು ನೀಡಲಾಗುವುದು.
2. ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಗರಿಷ್ಠ 200 ಸಂಖ್ಯೆ ಪ್ಲಾಸ್ಟಿಕ್ ಕ್ರೇಟ್ಸ್ ಅಥವಾ ಗರಿಷ್ಟ 2.00 ಹೆ., ಮಾವು ಪ್ರದೇಶಕ್ಕೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.
3. ಪ.ಜಾ/ಪ.ಪಂ ವರ್ಗಕ್ಕೆ–90% ಮತ್ತು ಇತರೆ–60% ರಂತೆ ಅನುಮೋದಿತ ಸರಭರಾಜುದಾರ ವಿವಿದ ಮಾದರಿಗಳ L1 ದರಗಳಿಗೆ ಸಹಾಯಧನಕ್ಕೆ ಪರಿಗಣಿಸಲಾಗುವುದು.
4. ಒಮ್ಮೆ ಗರಿಷ್ಠ ಮಿತಿಗೆ ಸಹಾಯಧನ ಪಡೆದ ಫಲಾನುಭವಿಗಳಿಗೆ ಮತ್ತೊಮ್ಮೆ ಸಹಾಯಧನಕ್ಕೆ ಅರ್ಹರಿರುವುದಿಲ್ಲ.
5. ರೈತರ ವಂತಿಕೆ ಶೇ.40/10 ರಷ್ಟು ಪಾವತಿಸಿ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸುವ ಫಲಾನುಭವಿಗಳು ನಿಗಮದ ವಂತಿಕೆ ಶೇ.60/90 ರಷ್ಟು ಸರಬರಾಜುದಾರರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅಥವಾ ಒಟ್ಟಾರೆ ಎಲ್–1 ದರಗಳಿಗೆ ಖರೀದಿಸಿದ ಫಲಾನುಭವಿಗಳಿಗೆ ನಿಗಮದ ವಂತಿಕೆ ಮೊತ್ತವನ್ನು ಶೇ.60/90 ರಷ್ಟನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು
ಮಾವು ಅಭಿವೃದ್ಧಿ ನಿಗಮ, ಬೆಂ